ಶ್ರೀ ಎಂ. ಚಂದ್ರಶೇಖರ್.— ಜಿಲ್ಲೆಯ ಹಿರಿಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಮತ್ತು ಖರ್ಗೆಯವರು ಇದ್ದಾರೆ. ನೀವುಗಳು ಸೇರಿ ಅಲ್ಲಿನ ಮ್ಯಾನೇಜ್‌ಮೆಂಟ್‌ನವರನ್ನು ಭೇಟಿ ಮಾಡಿ ಚರ್ಚೆ ಮಾಡಿದರೆ ವಿವಾದ ಬಗೆಹರಿಯುತ್ತದೆ, ನಿಮ್ಮ ಮಾತಿಗೆ ಒಪ್ಪಿಗೆ ಕೊಡಬಹುದು. ಆ ರೀತಿಯಲ್ಲಿ ಅದು ನಡೆಯಬೇಕೇ ಹೊರತು ಸರಕಾರ ಆದೇಶ ನೀಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಅಲ್ಲಿ ಹಂಗರ್ ಸ್ಟ್ರೈಕ್ ನಡೆಯುತ್ತಿದೆ. You have to help them.

ಶ್ರೀ ಧರ್ಮಸಿಂಗ್.— ನೀವು ಮಂತ್ರಿಗಳಾಗಿದ್ದೀರಿ, ನೀವೇ ಹೋಗಿ ಸಮಸ್ಯೆಯನ್ನು ಬಗೆಹರಿಸಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮುದ್ನಾಳ್‌ರವರು ಹೋಗಿ ಒಂದು ಮಾತು ಹೇಳಿದರೆ ಆಗುತ್ತದೆ.

(ಗೊಂದಲ)

ಶ್ರೀ ಧರ್ಮಸಿಂಗ್.— ದೂರವಾಣಿ ಸಂಖಾಂತರ ಇಲ್ಲವೇ ಅಲ್ಲಿನ ಮುಖ್ಯಸ್ಥರನ್ನು ಕರೆಯಿಸಿ ಮಾತನಾಡಿದರೆ ಹಂಗರ್ ಸ್ಟ್ರೈಕ್ ನಿಲ್ಲುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.— ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕು.

ಅಧ್ಯಕ್ಷರು.— ನೀವು ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೀವು ಈ ರೀತಿ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲ. ಸಮಯದ ಮಹತ್ವ ತಮಗೆ ಗೊತ್ತಿಲ್ಲವೇ? Not to be recorded.

(ಈ ಹಂತದಲ್ಲಿ ಮಾನ್ಯ ಶಾಣಪ್ಪನವರು ಪೆಲ್‌ಗೆ ಬಂದರು)

ಅಧ್ಯಕ್ಷರು.— ನೀವು ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಪ್ರತಿ ದಿವಸ ಕಾಲಿಂಗ್ ಅಟೆನ್‌ಷನ್ ಇರುತ್ತವೆ.

(ಗೊಂದಲ)

Mr. Speaker.— Nothing will be recorded.

(Interruption)

ನೀವು ಅವರ ಜೊತೆಯಲ್ಲಿ ಹೋಗಿ ಮಾತನಾಡಿ. Whatever you say it is expunged.

(ಗೊಂದಲ)

ಅಧ್ಯಕ್ಷರು.— ಈ ರೀತಿ ಮಾತನಾಡಿದರೆ ತಮ್ಮನ್ನು ಹೊರಕ್ಕೆ ಹಾಕಬೇಕಾಗುತ್ತದೆ. ಅವರ ಪಕ್ಕದಲ್ಲಿ ಹೋಗಿ ಕುಳಿತುಕೊಂಡು ಮಾತನಾಡಿ. ಬೇರೆ ವಿಷಯ ಇದೆ.

(IV) ಮೈಸೂರು ನಗರದ ನಾಗರೀಕರಿಗೆ ಕಳೆದ ಆರು ತಿಂಗಳಿನಿಂದ ನೀರು ಸರಬರಾಜಿನಲ್ಲಿ ಆಡಚಣೆ ಉಂಟಾಗಿರುವುದು

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ನಾಗರೀಕರಿಗೆ ಕಳೆದ ೬ ತಿಂಗಳಿನಿಂದ ನೀರು ಸರಬರಾಜಿನಲ್ಲಿ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನೂ ಕೂಡ ಇದೇ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮೈಸೂರು ನಗರದಲ್ಲಿ ಹಾಲಿ ಸುಮಾರು ೬ ಲಕ್ಷ ಜನಸಂಖ್ಯೆಯು ಇರುತ್ತದೆ. ಈಗ ಕಾವೇರಿ ನದಿ ಮತ್ತು ಸುಮಾರು ೯೦ ಕೊಳವೆ ಬಾವಿಗಳಿಂದ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಈ ಎರಡು ಮೂಲಗಳಿಂದ ದಿನ ೧ಕ್ಕೆ ಸುಮಾರು ೧೯ ಮಿಲಿಯನ್ ಗ್ಯಾಲನ್ ಪ್ರಮಾಣದ ನೀರನ್ನು

ಒದಗಿಸಲಾಗುತ್ತಿದೆ. ಈಗ ನಗರದಲ್ಲಿರುವ ಕೊಳವೆ ಮಾರ್ಗಗಳು ಅಸಮರ್ಪಕವಾಗಿರುವುದರಿಂದ ಮತ್ತು ಅನಿವಾರ್ಯವಾಗಿ ನೀರು ಸರಬರಾಜು ಮಾಡಬೇಕಾಗಿರುವುದರಿಂದ ಕೆಲವು ಬಡಾವಣೆಗಳಲ್ಲಿ ನೀರು ಪೂರೈಕೆಯು ತೃಪ್ತಿಕರವಾಗಿರುವುದಿಲ್ಲ.

ಸುಮಾರು ೧೫೦ ಲಕ್ಷ ರೂಪಾಯಿಗಳ ಅಂದಾಜಿನ ವೀಭಾಗಿಯ ಜಲಾಶಯಗಳ ಸಂಗ್ರಹಣ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ೨.೫೦ ಮಿಲಿಯನ್ ಗ್ಯಾಲನ್ ಸಾಮರ್ಥ್ಯವುಳ್ಳ ೩ ಜಲಾಶಯಂ ಗಳನ್ನು ಜಯನಗರ, ಯಾದವಗಿರಿ ಮತ್ತು ಜರ್ಮನ್ ಪ್ರೆಸ್ ಪ್ರದೇಶಗಳಲ್ಲಿ ಕಟ್ಟಲು ''ತೇಪಣ ದೇಣಿಗೆ'' ಯೋಜನೆಯಡಿಯಲ್ಲಿ ಸ್ಥಾಪಿಸಲಾಗುತ್ತಿದೆ.

ಕಾವೇರಿ ನೀರಿನಿಂದ ೮ ಮಿಲಿಯನ್ ಗ್ಯಾಲನ್ ನೀರಿನ ಸರಬರಾಜನ್ನು ಹೆಚ್ಚಿಸಲಂ ರೂ. ೯೩ ಲಕ್ಷ ಮತ್ತು ೧೭೦ ಲಕ್ಷ ಮೊತ್ತದ ಎರಡು ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದ್ದು ಇವುಗಳಿಗೆ ಮೈಸೂರಂ ಅಭಿವೃದ್ಧಿ ಪ್ರಾಧಿಕಾರವು ಅಂಗೀಕಾರ ನೀಡಿರುತ್ತದೆ.

ಮೈಸೂರು ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಪುನರ್‌ನವೀಕರಣ ಮಾಡಲು ೬೫೦ ಲಕ್ಷ ರೂ ಗಳ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಮೇಲೆ ಉದ್ದೇಶಿಸಿರುವ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರುವುದರಿಂದ ಮೈಸೂರು ನಗರದ ಜನತೆಗೆ ಕುಡಿಯುವ ನೀರನ್ನು ಸರಿಸಮಾನವಾಗಿ ವಿತರಣೆ ಮಾಡಲು ಸಾಧ್ಯವಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ:— ಮಾನ್ಯ ಅಧ್ಯಕ್ಷರೇ, ಸುಮಾರು ೯೦ ವರ್ಷಗಳ ಹಿಂದೆ ಮೈಸೂರು ನಗರಕ್ಕೆ ಈ ನೀರು ಸರಬರಾಜು ಯೋಜನೆ ಜಾರಿಗೆ ಬಂತು. ೪೫ ಗ್ಯಾಲನ್ಸ್ ಪರ್ [illegible]ಕ್ಯಾಪಿಟಾ ನೀರು ಮೈಸೂರಿನಲ್ಲಿ ಸರಬರಾಜಾಗುತ್ತಿತ್ತು. ನಾಲ್ಕು ಲಕ್ಷ ಇದ್ದ ಜನಸಂಖ್ಯೆ ಇವತ್ತು ಏಳು-ಏಳೂವರೆ ಲಕ್ಷಕ್ಕೆ ಹೋಗಿದೆ. ಈ ಜನಸಂಖ್ಯೆ ಏಳೂವರೆ ಲಕ್ಷಕ್ಕೆ ಹೋಗಿದ್ದರೂ ಸಹಿತ ಇದುವರೆಗೂ ೩೫ ಗ್ಯಾಲನ್ ನೀರು ಎಂದು ಹೇಳುತ್ತಾರೆ, ಕೆಲವು ಕಡೆ ೪ ಗ್ಯಾಲನ್ ಸಿಗುತ್ತದೆ, ಇನ್ನು ಕೆಲವು ಕಡೆ ೧೦ ಗ್ಯಾಲನ್ ಸಿಗುತ್ತದೆ, ಮತ್ತೊಂದು ಕಡೆಯಲ್ಲಿ ೨೦ ಗ್ಯಾಲನ್ ನೀರು ಸಿಗುತ್ತದೆ. ಈ ನೀರು ಸರಬರಾಜು ಇವೊತ್ತಿನ ದಿವಸ ಕೃಷ್ಣರಾಜಸಾಗರ, ಚಾಮರಾಜನಗರ ಮತ್ತು ನರಸಿಂಹರಾಜ ಕ್ಷೇತ್ರ ಈ ಎಲ್ಲಾ ಭಾಗಗಳಲ್ಲಿ ನೀರು ಸರಬರಾಜು ಇದ್ದಕ್ಕಿದ್ದ ಹಾಗೆ ಕಳೆದ ಆರೇಳು ತಿಂಗಳಿಂದ ಸರಿಯಾಗಿ ಆಗದೇ ಇರುವುದಕ್ಕೆ ಮೊದಲ ಕಾರಣವೇನು? ಎರಡನೆಯದು ನಮ್ಮ ಮೈಸೂರು ನಗರದಲ್ಲಿ ಈಗ ಡಿಸ್ಟ್ರಿಬ್ಯೂಷನ್ ಸಿಸ್ಟಂ ಏನು ಇದೆ, ಆ ಡಿಸ್ಟ್ರಿಬ್ಯೂಷನ್ ಸಿಸ್ಟಂನ್ನು ಇದುವರೆಗೂ ಸರಿಯಾಗಿ ಜಾರಿಗೆ ತಂದಿಲ್ಲ. ಈ ಡಿಸ್ಟ್ರಿಬ್ಯೂಷನ್ ಸಿಸ್ಟಂನ್ನು ಇಮ್ಮಿಡಿಯೇಟ್ ಆಗಿ ಜಾರಿಗೆ ತರುವುದಕ್ಕೆ ಸರ್ಕಾರ ಎಂಟೂವರೆ ಕೋಟಿ ರೂಪಾಯಿಗಳ ಯೋಜನೆಯನ್ನು ಕೊಟ್ಟಿದ್ದಾರೆ ಎಂದು ನಮಗೆ ತಿಳಿದುಬಂದಿದೆ. ಈ ಎಂಟೂವರೆ ಕೋಟಿ ರೂಪಾಯಿಗಳ ಡಿಸ್ಟ್ರಿಬ್ಯೂಷನ್ ಸಿಸ್ಟಂ ಏನು ಇದೆ ಈ ಬಾಬಿನಲ್ಲಿ ಆಕ್ಕೂಟ್ ವಾಟರ್ ಸ್ಕೇರ್‌ಸಿಟಿ ಏನು ಇದೆ ಅದಕ್ಕೆ ಎಷ್ಟು ಹಣವನ್ನು ಒದಗಿಸುತ್ತೀರಿ? ಕೊನೆಯದಾಗಿ, ಈ ವಾಟರ್ ಸಪ್ಲೈ ಸಿಸ್ಟಂನ್ನು ಇಮ್ಮಿಡಿಯೇಟ್ ಆಗಿ ಸಾಕಷ್ಟು ಚೆನ್ನಾಗಿ ಉತ್ತಮಗೊಳಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಅರ್ಬನ್ ವಾಟರ್ ಮುಖ್ಯ ಇಂಜಿನಿಯರ್‌ರವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಈ ಪ್ರಾಬ್ಲಮ್ ಇಮ್ಮಿಡಿಯೇಟ್ ಆಗಿ ನಿಲ್ಲಬೇಕಾದರೆ ಇಲ್ಲಿಗೆ ಕೊನೆಯ ಪಕ್ಷ ಒಂದು ಕೋಟಿ ರೂಪಾಯಿ ಆದರೂ ಕೂಡ ರಿಲೀಸ್ ಮಾಡದೇ ಹೋದರೆ ಅಕ್ಕೂಟ್ ವಾಟರ್ ಸ್ಕೇರ್ಸಿಟಿ ಮೈಸೂರಿನಲ್ಲಿ ಕಂಟಿನ್ಯೂ ಆಗುತ್ತದೆ. ದಯವಿಟ್ಟು ಈ ನೀರು ಸರಬರಾಜು ಸರಿಯಾಗಿ ಆಗಬೇಕಾದರೆ the major thing is that the distribution system of the water supply should be improved, If it is to be implemented the money is important. ಆದುದರಿಂದ ಮೈಸೂರಿನ ಈ ಡಿಸ್ಟ್ರಿಬ್ಯೂಷನ್ ಸಿಸ್ಟಂಗೆ ತಕ್ಷಣ ಕೊನೆಯ ಪಕ್ಷ ಒಂದು ಕೋಟಿ ರೂಪಾಯಿಯಾದರೂ ಕೊಡಬೇಕು. ಈ ಕೆಲಸವನ್ನು ಇಮ್ಮಿಡಿಯೇಟ್ ಆಗಿ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೀರಾ?

SMT. MUKTHARUNNISSA.—When the population of Mysore city was about 3 lakhs some quantity of water has been supplied. Now for 6 to 7 lakhs population the same quantity is fixed. Secondly, nowadays the government officials and Administrators, instead of supplying Cauveri water through pipelines, are digging borewells. Sometimes borewells also fail, due to wrong drilling or hard soil, etc. I would like to ask as to where is the need to dig the bore-wells spending huge amount in urban areas? Another thing is that

the Cauveri river is 10 Kms. far from Mysore City and the Kabini river is 8 Kms. far from the Mysore City. There are two rivers nearly. Why should not the government take steps to solve the water scarcity problem permanently? Particularly, in my Narasimharaja constituency people are paying Rs. 1.50 per pot. In some areas when the authorities releases water, they will stop the water in other area.

MR. SPEAKER.— Have you gone through the reply? ಕ್ಲಾರಿಫಿಕೇಶನ್ ಕೇಳಿ. ಭಾಷಣ ಮಾಡುವುದು ಬೇಡ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.— ನಾನು ಪಾಯಿಂಟ್ಸ್ ಮಾತ್ರ ಹೇಳುತ್ತಿದ್ದೇನೆ. ದಯವಿಟ್ಟು ಕೇಳಿ. Another thing is that earlier, the citizens of Mysore city were getting 40 gallons of water per day. Now, they stand in queue for day and night to get water. Everyday dharana and agitations are there. Even on Shivarathri festival they sat for dharana. It has also appeared in the paper. On 15th of this month they all sat dharana in front of Legislators' house. I would like to ask only one question as to when your government gifted 5 TMC of water to Tamil Nadu, why they are not giving to Mysore City which is near to Cauveri and Kabini rivers, for our kannadigas. Our hometown people have to suffer.

ಅಧ್ಯಕ್ಷರು.— ಈಗ ಏನು ಆಗಬೇಕು ಎಂಬುದನ್ನು ಕೇಳಿ?

SMT. MUKTHARUNNISSA. — I would like to ask the Hon. Minister as to whether they will permit us go to Tamil Nadu and tell Sri Karunanidhi that our Chief Minister has given you 5 TMC and we, as a result, people are suffering.

ಅಧ್ಯಕ್ಷರು — ಬೇಗಂರವರೇ ಕ್ಲಾರಿಫಿಕೇಶನ್ ಕೇಳಿ. ಕಾಲ್ ಅಟೆನ್‌ಷನ್ ಬಗ್ಗೆ ಹೇಳುವುದು ಬಿಟ್ಟು ಭಾಷಣ ಮಾಡುತ್ತಿದ್ದೀರಿ.

SMT. MUKTHARUNNISSA.— They are not taking action. Once in three days they release water. Everyday we are facing difficulty.

೨-೩೦ ಪಿ.ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಚಾರವನ್ನು ಹೇಳಿದ್ದಾರೆ ಅದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ವಾರ ನಮ್ಮ ಇಲಾಖೆಯ ಚೀಫ್ ಇಂಜಿನಿಯರ್ ಸಹಿತ ಹೋಗಿ ವಿಷಯವನ್ನು ತಿಳಿದುಕೊಂಡು ಬಂದಿದ್ದಾರೆ. ಈಗ ತಾತ್ಕಾಲಿಕವಾಗಿ ಸಮಸ್ಯೆಯನ್ನು ತಕ್ಷಣ ಬಗೆಹರಿಸಲಿಕ್ಕೆ ಏನು ಮಾಡಬೇಕೋ ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಕ್ರಮವನ್ನು ತತ್‌ಕ್ಷಣ ತೆಗೆದುಕೊಳ್ಳುತ್ತಾರೆ. ಶಾಶ್ವತವಾಗಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಆದಷ್ಟು ಬೇಗ ಹೆಚ್ಚಿನ ಹಣವನ್ನು ಸಹಿತ ಕೊಡಲಿಕ್ಕೆ ನಾವು ಎಲ್ಲಾ ಪ್ರಯತ್ನವನ್ನು ಮಾಡುತ್ತೇನೆ.

SMT. MUKTHARUNNUSA.—For wather supply they have made a provision of Rs. 20.14 crores. You have said that Karnataka Urban water supply and Drainge Board will take up 6month water supply schemes. But you have not mentioned about Mysore City. Kindly see Annexure-III of your budget speech